**ಡ್ರಗ್ಸ್ ಇನ್ವಿಟೇಷನ್ ಕಾರ್ಡ್, ಹೂವಿನ ಬೊಕೆ, ಗಿಫ್ಟ್ ಬಾಕ್ಸ್ ಹೀಗೆ ಹಲವು ರೂಪದಲ್ಲಿ ಸ್ಯಾಂಡಲ್‌ವುಡ್‌ನ ಹಲವರ ಮನೆಗೆ ನಿರಾತಂಕವಾಗಿ ಸರಬರಾಜಾಗುತ್ತಿದೆ. ಡ್ರಗ್ಸ್‌ಗಳನ್ನು ಸ್ಥಳೀಯವಾಗಿ ಗಿರಾಕಿಗಳಿಗೆ ತಲುಪಿಸುವವರನ್ನು ಈ ಮಾಫಿಯಾದಲ್ಲಿ ಪೆಡ್ಲರ್‌ಗಳು ಎಂದು ಹೇಳಲಾಗುತ್ತದೆ**



ಬಣ್ಣದ ಜಗತ್ತಿನಲ್ಲಿ ಹಾಸುಹೊಕ್ಕಾಗಿರುವ ಡ್ರಗ್ಸ್‌ನ ಆಫ್ ಸ್ಕ್ರೀನ್ ರೋಚಕ ಚಹರೆಗಳು ನಿಲುಕುವುದು 'ಆಫ್ ದಿ ರೆಕಾರ್ಡ್' ವಲಯದಲ್ಲಿಯೇ!

## ಡ್ರಗ್ಸ್ ಆ್ಯಕ್ಸಿಡೆಂಟ್!

ಸ್ಯಾಂಡಲ್‌ವುಡ್ ಲೋಕಕ್ಕೂ ಡ್ರಗ್ಸ್ ಮಾಫಿಯಾಕ್ಕೂ ಇರುವ ಸಂಬಂಧ ಹೊರಬಂದದ್ದು ಒಂದು ಅಪಘಾತದಲ್ಲಿ. 'ಆಕ್ಸಿಡೆಂಟ್' ಶಬ್ದದ ಎರಡು ಬಗೆಯ ಅರ್ಥಗಳನ್ನೂ ಇಲ್ಲಿ ಅನ್ವಯಿಸಿಕೊಳ್ಳಬಹುದು. ಅನಿರೀಕ್ಷಿತ ಮತ್ತು ಆಕಸ್ಮಿಕವಾಗಿಯೇ ಈ ಸಂಗತಿ ಹೊರಬಂದಿದೆ ಎನ್ನುವುದು ಒಂದು ಅರ್ಥ. ಹಾಗೆಯೇ ಇದು ಹೊರಬಂದಿದ್ದು ಬಹಳ ಸಲ ವಾಹನ ಅಪಘಾತದಲ್ಲಿ ಎನ್ನುವುದೂ ಗಮನಾರ್ಹ.

ಕಳೆದ ವರ್ಷ ಒಂದು ಕಾರ್ ಅಪಘಾತದಲ್ಲಿ ನಿರ್ದೇಶಕರೊಬ್ಬರ ಮಗ ತೀರಿಕೊಂಡಿದ್ದರು. ಆ ಕಾರಿನಲ್ಲಿ ಮಾದಕ ಪದಾರ್ಥ ಪತ್ತೆಯಾಗಿತ್ತು. ಅಷ್ಟೇ ಅಲ್ಲ, ಹಿರಿಯ ನಟರೊಬ್ಬರ ದ್ವಿತೀಯ ಪುತ್ರನೂ ಅದೇ ಕಾರಿನಲ್ಲಿ ಇದ್ದಿದ್ದೂ ಸಾಕಷ್ಟು ಸುದ್ದಿಯಾಗಿತ್ತು. ಆಮೇಲೆ ಆ ಪ್ರಕರಣ ಅಷ್ಟೇ ಆಕ್ಸಿಡೆನ್ಷಿಯಲ್ ಆಗಿಯೇ ಮುಗಿದುಹೋಯಿತು ಎನ್ನುವುದು ಬೇರೆಯೇ ಕಥೆ.

ಲಾಕ್‌ಡೌನ್ ಸಮಯದಲ್ಲಿ ನಟಿಯೊಬ್ಬಳು, ತನ್ನ ಜೊತೆಗೆ ಮೂವರನ್ನು ಕೂಡಿಸಿಕೊಂಡು, ಹೊಟ್ಟೆನೋವಿಗೆ ಮಾತ್ರೆ ತೆಗೆದುಕೊಳ್ಳಲೆಂದು ನಡುರಾತ್ರಿ ಮನೆಯಿಂದ ಹತ್ತಿಪ್ಪತ್ತು ಕಿಲೋಮೀಟರ್ ಬಂದು, ಎರಡನೇ ಗಾಳಿಪಟದ ಹಾಗೆ ತೇಲುತ್ತ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದ್ದ ಸಂಗತಿ ನೆನಪಿದೆಯಲ್ಲ... 'ಆಕೆ' ಹಿಂದಿನ ಸೀಟಿನಲ್ಲಿ ತನ್ನದೇ ಲೋಕದಲ್ಲಿ ತೇಲಾಡುತ್ತಿದ್ದಳು. ಹಾಗಾಗಿ ಅವಳಿಗೂ ಈ ಅಪಘಾತಕ್ಕೂ ಸಂಬಂಧವಿಲ್ಲ' ಎಂದು ಕೊಂಡಿ ಕಳಚುವ ಪ್ರಯತ್ನಗಳು ಈಗ ಭರದಿಂದ ಸಾಗಿವೆ.

ಹಿರಿಯ ನಿರ್ದೇಶಕ ಮತ್ತು ಹಿರಿಯ ನಟರ ಮುದ್ದಿನ ಹೆಣ್ಣುಮಕ್ಕಳಿಬ್ಬರು ಇದ್ದ ಕಾರು ಇತ್ತೀಚೆಗೆ ಹೆಸರುಘಟ್ಟ ಸಮೀಪದಲ್ಲಿ ರಸ್ತೆ ಪಕ್ಕದ ನೀಲಗಿರಿ ಮರಕ್ಕೆ ಮುತ್ತಿಕ್ಕಿದ್ದರ ಹಿಂದೆಯೂ ಮಾದಕ ಪದಾರ್ಥಗಳ ಕೊಡುಗೆ ಇದೆ ಎಂಬ ಮಾತುಗಳು ಜೋರಾಗಿಯೇ ಹರಿದಾಡುತ್ತಿವೆ. ಕೊನೆಗೆ ಅದು 'ಚಾಲಕನ ನಿರ್ಲಕ್ಷ್ಯ' ಎಂದು ದೂರು ದಾಖಲಾಗಿ, ಪ್ರಕರಣ ಸೇಫ್ ಝೋನ್‌ಗೆ ಹೊರಳಿಕೊಂಡಿದೆ.

ಪ್ರಶ್ನೆ ಕೇಳಿದವರನ್ನೇ ಮರು ಪ್ರಶ್ನೆ ಕೇಳುವ ಮೂಲಕ ತಮ್ಮನ್ನು ಪ್ರಶ್ನಾತೀತ ಎಂದು ಭಾವಿಸಿರುವ, ತಾರಾ ವರ್ಚಸ್ಸಿನ ನಟನ ಕಾರು, ಕರೆಂಟು ಕಂಬಕ್ಕೆ ಚುಂಬಿಸಿದ ಘಟನೆಯನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು.

## ಯಾಕೆ ಹೀಗೆ?

ಯಾಕೆ ಹೀಗೆ ಆಕ್ಸಿಡೆಂಟ್‌ಗಳು ಆದಾಗಲೆಲ್ಲ ಡ್ರಗ್ಸ್ ಘಾಟು ಏಳುತ್ತದೆ? ಮತ್ತೆ ಹೇಗೆ ತಣ್ಣಗಾಗುತ್ತದೆ ಎಂಬ ಪ್ರಶ್ನೆ ಏಳುವುದು ಸಹಜ. ಈ ಪ್ರಶ್ನೆಗೆ ಉತ್ತರ ಸಿಗಬೇಕು ಎಂದರೆ ಡ್ರಗ್ಸ್ ಮಾಫಿಯಾ ಕಾರ್ಯನಿರ್ವಹಿಸುವ ರೀತಿಯನ್ನು ತಿಳಿದುಕೊಳ್ಳಬೇಕು.

'ಕಾನೂನಿನಿಂದ ನಿಷೇಧಿತಗೊಂಡ ಮಾದಕ ಪದಾರ್ಥಗಳು ಸರಬರಾಜು ಆಗುವುದು ಬರೀ ವ್ಯಾಪಾರದ ಉದ್ದೇಶದಿಂದ ಮಾತ್ರವಲ್ಲ. ಅದಕ್ಕೆ ಬೇರೆ ಬೇರೆ ಕಾರಣಗಳಿವೆ. ಡ್ರಗ್ಸ್ ಮಾಫಿಯಾ ಮತ್ತು ಹೈಟೆಕ್ ವೇಶ್ಯಾವಾಟಿಕೆ ಸದಾ ಕೈ ಕೈ ಹಿಡಿದುಕೊಂಡೇ ಸಾಗುತ್ತಿರುತ್ತವೆ. ಮುಖ್ಯವಾಗಿ ಎರಡು ರೀತಿಗಳಲ್ಲಿ ಡ್ರಗ್ಸ್, ಗ್ರಾಹಕರನ್ನು ತಲುಪುತ್ತದೆ. ಒಂದು ನೇರವಾಗಿ ಅವರಿಗೇ ತಲುಪುವುದು. ಇನ್ನೊಂದು ಸೆಲೆಬ್ರಿಟಿ ಪಾರ್ಟಿಗಳಲ್ಲಿ ಬಳಕೆಯಾಗುವುದು. ರೇವ್ ಪಾರ್ಟಿಗಳಲ್ಲಿ ಡ್ರಗ್ಸ್ ಅತಿಯಾಗಿ ಬಳಕೆಯಾಗುತ್ತಿರುತ್ತದೆ. ಇದೊಂದು ರೀತಿಯಲ್ಲಿ ಹೊಸ ಹೊಸ ಡ್ರಗ್ಸ್ ಅಡಿಕ್ಟ್‌ಗಳನ್ನು ಸೃಷ್ಟಿಸುವ ತಾಣವೂ ಹೌದು. ಕಸ್ಟಮರ್ ಆಗಿದ್ದವರು ಸಬ್ ಪೆಡ್ಲರ್ ಆಗುವುದು, ಸಬ್‌ಪೆಡ್ಲರ್ ಆಗಿದ್ದವರು ಪೆಡ್ಲರ್ ಆಗುವುದು, ಇನ್ನೂ ಮೇಲಕ್ಕೆ ಹೋಗುವ ಬಡ್ತಿ ಕಾರ್ಯಕ್ರಮಗಳಿಗೆಲ್ಲ ರೇವ್ ಪಾರ್ಟಿಗಳೇ ಪರೀಕ್ಷಾತಾಣಗಳಾಗಿರುತ್ತವೆ' ಎನ್ನುತ್ತಾರೆ ಮಾದಕ ಜಗತ್ತಿನ ಹಲವು ಮುಖಗಳನ್ನು ಬಲು ಹತ್ತಿರದಿಂದ ನೋಡಿರುವ ಚಿತ್ರರಂಗದ ವ್ಯಕ್ತಿಯೊಬ್ಬರು.

'ಆಗಾಗ ಇಂಥ ಸಂತೋಷಕೂಟಗಳು ನಡೆಯುತ್ತಲೇ ಇರುತ್ತವೆ. ಲಾಕ್‌ಡೌನ್ ಸಮಯದಲ್ಲಿಯಂತೂ ಇದು ಎಗ್ಗಿಲ್ಲದೆ ನಡೆದಿದೆ. ಆ ಪಾರ್ಟಿಯಿಂದ ಮತ್ತಿನಲ್ಲಿಯೇ ವಾಹನ ಚಲಾಯಿಸಿಕೊಂಡು ಬರುವಾಗಲೇ ಇಂಥ ಆಕ್ಸಿಡೆಂಟುಗಳು ಸಂಭವಿಸುತ್ತವೆ. ಗುಂಗಿನಲ್ಲಿದ್ದವರನ್ನು ಪೊಲೀಸರು ತಡೆದು ನಿಲ್ಲಿಸಿದರೂ ಅವರು ಗಲಾಟೆ ಮಾಡುತ್ತಾರೆ. ಇಲ್ಲಿ ಬರೀ ಚಿತ್ರರಂಗದವರಷ್ಟೇ ಅಲ್ಲ, ದೊಡ್ಡ ಉದ್ಯಮಿಗಳು, ರಾಜಕಾರಣಿಗಳ ಮಕ್ಕಳೂ ಇರುತ್ತಾರೆ' ಎಂದೂ ಅವರು ಮಾಹಿತಿ ನೀಡುತ್ತಾರೆ.

ಸೂಕ್ಷ್ಮವಾಗಿ ನೋಡಿದರೆ ಹೈಟೆಕ್ ವೇಶ್ಯಾವಾಟಿಕೆಯ ಜಾಲಕ್ಕೂ ಡ್ರಗ್ಸ್ ಅಮಲು ಲೇಪಿತವಾಗಿರುವುದಕ್ಕೂ ಗಾಂಧಿನಗರದ ಗಲ್ಲಿಗಳಲ್ಲಿಯಷ್ಟೇ ಅಲ್ಲ, ಕಿರುತೆರೆಯ ವಠಾರದಲ್ಲಿಯೂ ಹಲವು ಪುರಾವೆಗಳು ಸಿಗುತ್ತವೆ.

ಒಂದು ಮೂಲದ ಪ್ರಕಾರ ಬೆಂಗಳೂರಿನ ಅತಿ ಶ್ರೀಮಂತರು, ರಾಜಕಾರಣಿಗಳು, ಹೊರಗಡೆಯಿಂದ ಕೆಲವು ದಿನಗಳ ಮಟ್ಟಿಗೆ ಉಳಿದುಕೊಳ್ಳಲು ಬಂದಿರುವ ಬ್ಯುಸಿನೆಸ್‌ಮೆನ್‌ಗಳಿಗೆ ಕಿರುತೆರೆ ಮತ್ತು ಹಿರಿತೆರೆಯ ನಟಿಯರನ್ನು 'ಸಪ್ಲೈ' ಮಾಡುವ ದೊಡ್ಡ ಜಾಲವೂ ಇಲ್ಲಿ ಸಕ್ರಿಯವಾಗಿದೆ. ಕನ್ನಡದಲ್ಲಿ ಚಿಕ್ಕ ವಯಸ್ಸಿಗೇ ದೊಡ್ಡ ಬೇಡಿಕೆ ಗಿಟ್ಟಿಸಿಕೊಂಡ ಹಾಸ್ಯನಟನೊಬ್ಬ ಈ 'ಸಪ್ಲೈ' ಕೆಲಸದಲ್ಲಿ ಸಕ್ರಿಯರಾಗಿದ್ದರು ಎಂಬ ಮಾತೂ ಇದೆ. ಬಹಳಷ್ಟು ಸಲ ಈ ಜಾಲವೂ ಡ್ರಗ್ಸ್ ದಂಧೆಯೂ ಕೆಲವು ಕೊಂಡಿಗಳಲ್ಲಿ ಓವರ್‌ಲ್ಯಾಪ್ ಆಗುತ್ತಲೇ ಇರುತ್ತವೆ. ಯಾಕೆಂದರೆ ಇತ್ತೀಚೆಗಿನ ಪ್ರಕರಣದಲ್ಲಿ ಸಿಕ್ಕಿರುವ 'ಎಂಡಿಎಂಎ' ಎಂಬ ಡ್ರಗ್ಸ್ ಅನ್ನು ಸೇವಿಸುವುದು ಮಾದಕತೆಯ ಸುಖಕ್ಕಷ್ಟೇ ಅಲ್ಲ. ಅದನ್ನು ಸೇವಿಸಿದರೆ ಯೌವನ ಕುಂದುವುದಿಲ್ಲ